

ಒಂದು ಊರಿನಲ್ಲಿ ದುಗ್ಗನೆಂಬುವವನಿದ್ದ. ನಿತ್ಯ ಕಾಡಿನಿಂದ ಒಣಮರಗಳನ್ನು ಕಡಿದು, ನಗರಕ್ಕೆ ತಂದು, ಮಾರಿ ಬಂದ ಹಣದಿಂದ ಜೀವನ ನಡೆಸುತ್ತಿದ್ದನು. ಒಮ್ಮೆ ಕಾಡಿನಿಂದ ಬರುವಾಗ ಹಳ್ಳವೊಂದರಲ್ಲಿ 'ಕಾಪಾಡಿ, ಕಾಪಾಡಿ' ಎಂಬ ಕೀಚಲು ಧ್ವನಿಯೊಂದು ಕೇಳಿಸಿತು. ಹತ್ತಿರ ಹೋಗಿ ನೋಡಿದ ದುಗ್ಗನಿಗೆ, ಪುಟಾಣಿ ಹಂದಿಯ ಮರಿಯೊಂದು ಕೆಸರಿನಲ್ಲಿ ಸಿಕ್ಕಿ ಹೊರಬರಲು ಹೋರಾಡುತ್ತಿದ್ದುದು ಕಂಡಿತು. ದುಗ್ಗನನ್ನು ನೋಡಿದ ಹಂದಿಮರಿ 'ನನ್ನನ್ನು ಕಾಪಾಡು' ಎಂದು ಮೊರೆಯಿಟ್ಟಿತು. ದುಗ್ಗನಿಗೆ ಅಯ್ಯೋ ಅನ್ನಿಸಿ, ಕಷ್ಟಪಟ್ಟು ಹಂದಿಮರಿಯನ್ನು ರಕ್ಷಿಸಿದ. ನಂತರ ಸೌದೆ ಹೊರೆ ಸಿದ್ಧಮಾಡಿ ಹೊತ್ತು ಮನೆ ಕಡೆ ಹೊರಟ. ಸ್ವಲ್ಪ ದೂರ ಹೋಗುವದರಲ್ಲಿ ತನ್ನನ್ನು ಯಾರೋ ಹಿಂಬಾಲಿಸುತ್ತಿದ್ದಾರೆ ಎಂದು ನೋಡಿದರೆ, ಅದು ಆತ ರಕ್ಷಿಸಿದ ಹಂದಿ ಮರಿಯೇ ಆಗಿತ್ತು. 'ಅಯ್ಯೊ ನೀನೇಕೆ ನನ್ನ ಹಿಂದೆ ಬರುತ್ತೀಯಾ? ಊರಿನಲ್ಲಿ ನಾಯಿಗಳು ನಿನ್ನನ್ನು ನೋಡಿದರೆ ತಿಂದೇ ಹಾಕುತ್ತವೆ, ಅಷ್ಟೆ' ಎಂದ. ಆದರೆ ಹಂದಿ ಮರಿ 'ನನಗೆ ಯಾರೂ ಇಲ್ಲ. ನಿನ್ನೆ ಹುಲಿಯೊಂದು ನನ್ನ ತಾಯಿಯನ್ನು ಕೊಂದು ಹಾಕಿತು. ಅದರಿಂದ ತಪ್ಪಿಸಿಕೊಳ್ಳುವ ಆತುರದಲ್ಲಿಯೇ ನಾನು ಹಳ್ಳಕ್ಕೆ ಬಿದ್ದದ್ದು. ನೀನು ನನ್ನನ್ನು ಕರೆದುಕೊಂಡು ಹೋಗಿ ಸಾಕಿಕೊ. ದೊಡ್ಡವನಾದ ಮೇಲೆ ನನ್ನನ್ನು ಮಾಂಸಕ್ಕಾಗಿ ಮಾರಿದರೆ ನಿನಗೆ ಸಾಕಷ್ಟು ದುಡ್ಡು ಬರುತ್ತದೆ' ಎಂದಿತು. ದುಗ್ಗನಿಗೂ ಅದು ಸರಿಯೆನ್ನಿಸಿ ಮರಿಯನ್ನು ಎತ್ತಿಕೊಂಡು ಹೋದನು.

ವರ್ಷವೆರಡು ಕಳೆಯುವುದರಲ್ಲಿ, ಮರಿ ಸಾಕಷ್ಟು ಬಲಿಷ್ಠವಾಗಿ ಬೆಳೆಯಿತು. ದುಗ್ಗ ಅದಕ್ಕೆ, ಗಡ್ಡೆ ಗೆಣಸು ಕಬ್ಬು ಮೊದಲಾದವನ್ನು ಚೆನ್ನಾಗಿ ನೀಡಿ ಸಾಕಿದ. ತನಗೇ ತಿನ್ನಲು ಇರದಿದ್ದರೂ ಮರಿಗೆ ಮಾತ್ರ ಏನೂ ಕೊರತೆಯಾಗದಂತೆ ನೋಡಿಕೊಂಡ. ದಷ್ಟಪುಷ್ಟವಾಗಿ ಬೆಳೆದಿದ್ದ ಅದರ ಮೇಲೆ ಕಳ್ಳರ ಕಣ್ಣು ಬಿತ್ತು. ಒಂದು ದಿವಸ, ಕಳ್ಳರು ಹಂದಿಯನ್ನು ಹೊತ್ತೊಯ್ಯಲು ದುಗ್ಗನ ಮನೆಗೆ ನುಗ್ಗಿದರು. ಆಗ ಹಂದಿ ಅವರನ್ನು ತನ್ನ ಕೋರೆ ದಾಡೆಗಳಿಂದ ಗುದ್ದಿ ಗಾಯಗೊಳಿಸಿ ಹೆದರಿಸಿ ಓಡಿಸಿಬಿಟ್ಟಿತು. ನಂತರ ದುಗ್ಗನಿಗೆ 'ಈಗ ನೀನು ನನ್ನನ್ನು ಯಾರಿಗಾದರು ಮಾರಿಬಿಡು. ಒಂದಷ್ಟು ದುಡ್ಡು ಬರುತ್ತದೆ. ಇಲ್ಲಾ ಎಂದರೆ ಒಂದಲ್ಲಾ ಒಂದು ದಿನ ನಾನು ಕಳ್ಳರ ಪಾಲಾದರೆ ಯಾರಿಗೂ ಲಾಭವಿಲ್ಲ' ಎಂದಿತು.

ದುಗ್ಗನಿಗೆ ಬಹಳ ದುಃಖವಾಯಿತು. ಹೆಂಡತಿ ಮಕ್ಕಳಿಲ್ಲದ ಆತ ಅದನ್ನು ಅವನಿಗರಿವಿಲ್ಲದೇ ಹಚ್ಚಿಕೊಂಡುಬಿಟ್ಟಿದ್ದ. ಹಂದಿಯನ್ನು ಮಾರುವುದಕ್ಕೆ ಅವನಿಗೆ ಮನಸ್ಸಾಗಲಿಲ್ಲ. ಕಳ್ಳರ ಪಾಲು ಮಾಡಲೂ ಇಷ್ಟವಾಗಲಿಲ್ಲ. ಬೆಳಗ್ಗೆ ಎದ್ದವನೆ, ಅದನ್ನು ಕರೆದುಕೊಂಡು ಅದು ಸಿಕ್ಕಿದ್ದ ಕಾಡಿಗೆ ಹೊರಟ. ಅಲ್ಲಿ ಹಂದಿಯನ್ನು ತಬ್ಬಿ ಮುದ್ದಿಸುತ್ತಾ, 'ನೋಡು, ನಿನ್ನನ್ನು ಕೊಂದು ತಿನ್ನುವವರಿಗೆ ಮಾರಲು ನನಗೆ ಸಾಧ್ಯವಿಲ್ಲ. ಊರಿನಲ್ಲಿದ್ದರೆ ಕಳ್ಳರ ಪಾಲಾಗಿ, ಅವರಿಂದ ಸಾಯಬೇಕಾಗುತ್ತದೆ. ಆದ್ದರಿಂದ ನೀನು ನಿನ್ನ ಕಾಡಿನಲ್ಲಿ ಹೋಗಿ, ಹೇಗಾದರು ಬದುಕಿಕೊ' ಎಂದು ಕಣ್ಣೊರೆಸಿಕೊಂಡನು. ಹಂದಿಗೂ ಅದು ಸರಿಯೆನ್ನಿಸಿ ದುಗ್ಗನಿಂದ ಬೀಳ್ಕೊಂಡಿತು.

ಸ್ವಲ್ಪ ದೂರ ಹೋಗುವಷ್ಟರಲ್ಲಿ, ಕೆಸರು ತುಂಬಿದ್ದ ಹಳ್ಳವೊಂದರಲ್ಲಿ ಹಲವಾರು ಹಂದಿಗಳು ತಮ್ಮ ತಮ್ಮ ಮರಿಗೊಳೊಂದಿಗೆ ಆಟವಾಡುತ್ತಿದ್ದವು. ಅವೆಲ್ಲವೂ ನೋಡಲು ಅತ್ಯಂತ ಬಡಕಲಾಗಿ ಕಾಣುತ್ತಿದ್ದವು. ತನ್ನನ್ನು ತಾನೆ ನೋಡಿಕೊಂಡ ದುಗ್ಗನ ಹಂದಿ, ತಾನೂ ಕೆಸರಿನಲ್ಲಿ ಗಡ್ಡೆ ಕಿತ್ತು ತಿನ್ನುತ್ತಾ ಅವುಗಳತ್ತ ಸಾಗಿತು. ಅಷ್ಟು ದೊಡ್ಡದಾದ ಹಂದಿಯನ್ನು ಕಂಡು ಅವೆಲ್ಲಾ ಹೆದರಿ ಚೀರಲಾರಂಭಿಸಿದವು. ಆಗ ದುಗ್ಗನ ಹಂದಿ 'ಹೆದರಿಕೊಳ್ಳಬೇಡಿ. ನಾನೂ ನಿಮ್ಮಂತೆಯೇ